(*e*) whether there is any case of a village panchayet not being formed in Mundargi Taluk on account of long delay caused in the separation of Majare village from the principal one and if so, which is that village ;

(*f*) what steps have been taken up to expedite the work separation of that particular village ?

A.—Sri M. V. KRISHNAPPA (Minister for Revenue).—

(*a*) Nil.

(*b*), (*c*) and (*d*) Do not arise in view of the reply to clause (*a*).

(*e*) No such case.

(*f*) Does not arise in view of the replies given to clauses (*a*) and (*e*).

ಶ್ರೀ ಸಿ. ಎಸ್. ಹುಲ್ಕೋಟಿ.—ಈ ವಿಷಯದಿಂದ ಗ್ರಾಮ ಪಂಚಾಯಿತಿ ರಚಿಸಲು ತೊಂದರೆಯಾಗಿದೆ ಎಂದು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿದ ಮೇಲೆ ಸರ್ಕಾರದವರು ಕೈಗೊಂಡ ಕಾರ್ಯ ಕ್ರಮಗಳೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ತುರ್ತು ಪರಿಸ್ಥಿಯಿಂದ ಇದನ್ನು ಸ್ವಲ್ಪ ಮುಂದಕ್ಕೆ ಹಾಕಲಾಗಿದೆ. ಈ ವಿಚಾರದಲ್ಲಿ ಯಾವ ತೀರ್ಮಾನವನ್ನೂ ಕೈಗೊಂಡಿಲ್ಲ.

ಶ್ರೀ ಸಿ. ಎಸ್. ಹುಲ್ಕೋಟಿ.—ಹಾಗಿದ್ದರೆ ಇಲ್ಲಿ ಅಂಥ ನಂದರ್ಭಗಳನ್ನೆವೂ ಇಲ್ಲ ಎಂದು ಉತ್ತರ ಕೊಟ್ಟಿರುವುದು ಸರಿಯೇ ?

Sri M. V. KRISHNAPPA.—Nothing has happened. No panchayet formation has been stopped because the revenue village has not been separated from the main village.

ಶ್ರೀ ಟಿ. ಕೆ. ಕಂಬಳಿ.—ಈ ಗ್ರಾಮಗಳನ್ನು ಬೇರ್ಪಡಿಸುವ ವಿಚಾರದಲ್ಲಿ ಅಲ್ಲಿಯ ಜನ ಸಂಖ್ಯೆ, ಉತ್ಪತ್ತಿ ಹಾಗೂ ಆ ಊರುಗಳ ವಿಸ್ತೀರ್ಣ ಇವುಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆಯೆ!

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಅಲ್ಲಿ ಒಂದು ಹೊಸ ಹಳ್ಳಿಯನ್ನೇ ತಂದಿಟ್ಟ ಹಾಗೆ ಆಗುತ್ತದೆ. ನರ್ವೆ ಆಗಬೇಕು. ಇದಕ್ಕೆಲ್ಲ ಕಾಲಬೇಕು. ಆದುದರಿಂದ ಈಗಿನ ತುರ್ತು ಪರಿಸ್ಥಿತಿಯಲ್ಲಿ ಇದನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಈ ಕಾರ್ಯ ಇಷ್ಟು ತಡವಾಗಲು ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನಾಗಲೇ ಹೇಳಿದೆನಲ್ಲ ಅವೇ ಕಾರಣಗಳು.

ಶ್ರೀ ಟಿ. ಕೆ. ಕಂಬಳಿ.—ತಾವು ಈ ವಿಚಾರದಲ್ಲಿ ಇನ್ನು ನರ್ವೆ ನಡೆನದಿದ್ದರೆ ಯಾವಾಗ ಇದನ್ನು ಪೂರೈಸುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ಮಾನ್ಯುಯಲ್‌ನಲ್ಲಿ ಮೇಜರ್ ಆಂಡ್ ಮೈನರ್ ಪಾಪ್ಯುಲೇಷನ್ ಗ್ರಾಮಗಳು ಎಂದು ಇವೆ. ಅದರ ಪ್ರಕಾರ ಮಾಡಲಾಗುತ್ತದೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಇನ್ನೆಷ್ಟು ದಿವಸಗಳಲ್ಲಿ ಮುಗಿಸುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇಗ ಮುಗಿಸಿದಾಗ್ಗೂ ಈಗ ಅದರ ತೀರ್ಮಾನವನ್ನು ತೆಗೆದು ಕೊಳ್ಳುವುದಕ್ಕಾಗುವುದಿಲ್ಲ.

Number of Officials of the Revenue Department that are awaiting Promotions to the post of Tahsildars after reaching their Maximum Scale.

*Q.—341. Sri V. S. LAKSHMIKANTHAPPA (Sagar).—

Will the Government be pleased to state :—

(*a*) the number of officials of the Revenue Department, in the State that are awaiting promotions to the post of Tahsildars, after reaching their maximum scale (Divisionwise information to be furnished) ;

(*b*) the procedure followed in filling up such vacancies of Tahsildars in the State ?

A.—Sri M. V. KRISHNAPPA (Minister for Revenue).—

(a) Bangalore — Nil
Mysore — 3 (Stenos)
Gulbarga — 9
Belgaum — Nil

(b) The procedure as prescribed in the Mysore Administrative Services (Recruitment) Rules, 1957 is followed in filling up such vacancies.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ರೆವಿನ್ಯೂ ಇಲಾಖೆಯಲ್ಲಿ ಪ್ರೊಬೇಷನರಿ ರೆವಿನ್ಯೂ ಇನ್‌ಸ್ಪೆಕ್ಟರುಗಳಾಗಿ ಕೆಲಸಕ್ಕೆ ಸೇರಿರತಕ್ಕ ಪದವೀಧರರಾದ ಹಾಗೂ ಅವರ ಪರಮಾವಧಿ ದರ್ಜೆ ಗೇರಿದ್ದುವುಂದೆ ಭಡತಿ ಸಿಕ್ಕದೆ ಕಾದಿರತಕ್ಕ ಜನಗಳ ಸಂಖ್ಯೆ ಎಷ್ಟು ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಬಗ್ಗೆ ತಾವು ಒಂದು ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ ಉತ್ತರವನ್ನು ಓದಗಿಸಲಾಗುತ್ತದೆ. ಆದರೆ ಈಗ ತಾವು ಏನು ಪ್ರಶ್ನೆ ಕೇಳಿದ್ದಿರೋ ಅದಕ್ಕೆ ತಕ್ಕ ಉತ್ತರವನ್ನು ಈಗ ಒದಗಿಸಲಾಗಿದೆ. ಗುಲ್ಬರ್ಗ ಡಿವಿಜನ್ ಒಂದನ್ನು ಬಿಟ್ಟರೆ ಇನ್ನುಳಿದ ಎಲ್ಲ ಡಿವಿಜನ್‌ಗಳಲ್ಲಿಯೂ ಪ್ರಮೋಷನ್ ಸಿಕ್ಕಿವೆ. ಎಲ್ಲಿಯೂ ಯಾವ ಜಾಗವೂ ಖಾಲಿ ಇಲ್ಲ. ಈ ನೌಕರಿಗಳಲ್ಲಿ ಶೇಕಡ 50ರಷ್ಟನ್ನು ಡೈರೆಕ್ಟ್ ರೆಕ್ರೂಟ್‌ಮೆಂಟ್ ಮೂಲಕ ಭರ್ತಿ ಮಾಡಲಾಗುತ್ತದೆ. ಇನ್ನು 30 ಪರ್ಸೆಂಟ್ ಇರತಕ್ಕ ಪ್ರಮೋಷನ್‌ನಲ್ಲಿ 2 ಪರ್ಸೆಂಟನ್ನು ಶೀಘ್ರಲಿಪಿಗಾರರಿಗೆ ಮೀಸಲಾಗಿದೆ. ಇನ್ನುಳಿದ 20 ಪರ್ಸೆಂಟಿನಲ್ಲಿ ಎಲ್ಲವನ್ನೂ ಪಿ. ಎಸ್. ಸಿ. ಅವರು ಭರ್ತಿಮಾಡುತ್ತಾರೆ. ಇದು ನಮ್ಮಲ್ಲಿರತಕ್ಕ ರೆಕ್ರೂಟ್‌ಮೆಂಟ್ ಸಿಸ್ಟಂ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಈ ಇಲಾಖೆಯಲ್ಲಿ ತಮಗೆ ಅನ್ಯಾಯವಾಗಿದೆ ಎಂದು ಕೋರ್ಟುಗಳಿಗೆ ಎಷ್ಟು ಜನ ರಿಟ್ ಹಾಕಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಈ ವಿಚಾರವನ್ನು ಈಗಲಾದರೂ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರಿಗಿಂತ ಮೇಲೆ ಪದವೀಧರರಿರುವಾಗ ನಾವು ರೂಲ್ಸಿಗೆ ವಿರೋಧವಾಗಿ ಏನು ಮಾಡುವುದಕ್ಕೂ ಆಗುವುದಿಲ್ಲ. ಅವರವರ ಸೀನಿಯಾರಿಟಿ ಪ್ರಕಾರವೇ ಆಗಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮೈಸೂರು ಡಿವಿಜನ್ನಿನಲ್ಲಿ ಮೂರು ಜನ ಸ್ಪೆನೋಗ್ರಾಫರುಗಳನ್ನು ತಹಶೀಲುದಾರರುಗಳಾಗಿ ಪ್ರಮೋಷನ್ನು ಮಾಡಬೇಕೆಂದು ಆಲೋಚನೆ ಮಾಡಿದ್ದಾರೆಂದು ತಿಳಿದುಬರುತ್ತದೆ. ಹಾಗೆ ಸ್ಪೆನೋಗ್ರಾಫರುಗಳನ್ನು ನೇಮಿಸಿಕೊಂಡರೆ ಈ ತಹಶೀಲುದಾರಿಹುದ್ದೆಗೆ ಧಕ್ಕೆ ಬರುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂತಹುದೇನೂ ಇಲ್ಲ. ಅವರಿಗೆ ಟ್ರೈನಿಂಗು ಕೊಡಲಾಗುತ್ತದೆ. ಅಲ್ಲದೆ ಸ್ಪೆನೋಗ್ರಾಫರುಗಳು ನಮಗಿಂತಲೂ ಬುದ್ಧಿವಂತರು, ಅಮಲ್ದಾರರುಗಳಾಗಲು ಲಾಯಕ್ಕಾದವರು ಅನೇಕರು ಇದ್ದಾರೆ, ಅವರು ಅದೇ ವೃತ್ತಿಯಲ್ಲಿರಬೇಕೆಂದೇನೂ ಇಲ್ಲ.

Tibetan Refugees settled in the State

*Q.—679. Sri S. GOPALA GOWDA (Thirthahalli).—

Will the Government be pleased to state:—

(a) the total number of Tibetan Refugees settled in the State and the places where they are settled (details to be given as to the number of men, women and children);

(b) the details of facilities like, housing, drinking water, schools, entertainments, etc., afforded by the State in the colonies where Tibetan Refugees are settled together with the amount spent on each item ?